ಮೂಲ ದಾವಾ ಸಂಖ್ಯೆ. 127/2018 ಡಿ ಡಬ್ಲ್ಯೂ 1

(ದಿನಾಂಕ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ನನಗೆ ವಾದಿಯರು ಗೊತ್ತು. ವಾದಿಯರು ನನ್ನ ಸಣ್ಣಪ್ಪನ ಮಕ್ಕಳು. ನನ್ನ ಸಣ್ಣಪ್ಪನ ಹೆಸರು ಗೋಣೆಪ್ಪ ಅವನಿಗೆ ಮರಿಗೋಣೆಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಬಸಪ್ಪ. ನನ್ನ ಅಜ್ಜನಿಗೆ 2 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು, ಅವಳ ಹೆಸರು ಹಳ್ಳಿ ಬಸಮ್ಮ. ಹಳ್ಳಿ ಬಸಮ್ಮ ತೀರಿಕೊಂಡಿದ್ದಾಳೆ, ಅವರಿಗೆ ಗಂಡ ಮಕ್ಕಳು ಯಾರು ಇರುವುದಿಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜ ಅಮ್ಮನ ಆಸ್ತಿಗಳು ಆಗಿರುತ್ತವೆ. ಒಟ್ಟು ಜಮೀನುಗಳು 27 ಎಕರೆ ಇರುತ್ತವೆ. ವಾದಿಯರಿಗೆ ಸೇರಿದ ಒಂದು ಮನೆ ಮತ್ತು ನಮಗೆ ಸೇರಿದ ಒಂದು ಮನೆ ಇದೆ. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳು ಈಗ ಬಹಳ ವರ್ಷಗಳ ಹಿಂದೆ ಭಾಗ ಆಗಿರುತ್ತವೆ. ನನ್ನ ಜನನನದ ಪೂರ್ವದಲ್ಲಿ ದಾವಾ ಆಸ್ತಿಗಳು ವಿಭಾಗ ಆಗಿರುತ್ತವೆ. ಸದರಿ ವಿಭಾಗ ಬರೆವಣಿಗೆಯಲ್ಲಿ ಆಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಣ್ಣಪ್ಪ ಮರಿಗೋಣೆಪ್ಪ ಇವರನ್ನು ನಾನು ನೋಡಿದ್ದೇನೆ. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ನನ್ನ ಜನನನದ ಪೂರ್ವದಲ್ಲಿ ಬೇರೆ ಬೇರೆ ಆಗಿರುತ್ತಾರೆ. ವಿಭಾಗದಲ್ಲಿ ನಮ್ಮ ತಂದೆಗೆ ಯಾವ ಯಾವ ಜಮೀನುಗಳು ಮತ್ತು ನಮ್ಮ ಚಿಕ್ಕಪ್ಪರವರಿಗೆ ಯಾವ್ಯಾವ ಜಮೀನುಗಳು ಬಂದಿರುತ್ತವೆ ಅಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಗೆ ನಾವು 2 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ನಮ್ಮ ವಿವಾಹಗಳನ್ನು ನನ್ನ ತಂದೆಯವರೇ ನಿರ್ವಹಿಸಿರುತ್ತಾರೆ. ದಾವಾ ಆಸ್ತಿಗಳ ಕುರಿತು ನಾವು ಸಹೋದರರು ಯಾವುದೇ ಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಂದೆಯವರು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನಮ್ಮ ಚಿಕ್ಕಪ್ಪ ಇವರು ಅನಕ್ಷರಸ್ಥರು ಇದ್ದರು. ನನ್ನ ಚಿಕ್ಕಪ್ಪ ಇವನಿಗೆ ದುಶ್ಚಟಗಳು ಇದ್ದವು ಎಂದರೆ ಸರಿ.

2. ಸರ್ವೆ ನಂಬರ್ 266 ರ 10.5 ಎಕರೆ ಜಮೀನಿನಲ್ಲಿ ವಿಭಾಗದಲ್ಲಿ ನಿಮ್ಮ ತಂದೆಗೆ ಮತ್ತು ನಿಮ್ಮ ಚಿಕ್ಕಪ್ಪಗೆ ಎಷ್ಟು ಕ್ಷೇತ್ರ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು ನನ್ನ ತಂದೆಯವರು ಖರೀದಿಸಿರುತ್ತಾರೆ ಎನ್ನುತ್ತಾರೆ. ಆ ಜಮೀನನ್ನು ನನ್ನ ತಂದೆ ಬಂಗಾರಿ ಬುಡ್ಡಪ್ಪ ಇವರಿಂದ ಖರೀದಿಸಿರಬಹುದು ನಿಖರವಾದ ಹೆಸರು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 266 ಮತ್ತು ಉಳಿದ ದಾವಾ ಆಸ್ತಿಗಳ ಕುರಿತು ಈ ವರೆಗೂ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಇವರ ನಡುವೆ ಯಾವುದೆ ರೀತಿಯ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂ 266

ಜಮೀನನ್ನು ಆಯ್ಕೆ ಮಾಡಿಕೊಡುವ ಅಧಿಕಾರ ನಮ್ಮ ಚಿಕ್ಕಪ್ಪನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆಯವರ ಹೆಸರಿಗೆ ದಿನಾಂಕ 31.10.1963 ರಂದು ಖರೀದಿ ಪತ್ರ ಬರೆದು ಕೊಡುವ ಅಧಿಕಾರ ನಮ್ಮ ಚಿಕ್ಕಪ್ಪ ಇವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ನನ್ನ ಚಿಕ್ಕಪ್ಪನ ಪೂರ್ವದಲ್ಲಿ ಮರಣಹೊಂದಿದ್ದಾರೆ. ನಮ್ಮ ತಂದೆಯವರು ಆಯ್ಕೆ ಪತ್ರ ಮತ್ತು ಖರೀದಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮರಣದ ನಂತರ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ವಿಚಾರ ನನಗೆ ಗೊತ್ತು. ದಿ 10.07.1993 ರಂದು ನಾವು ಅಣ್ಣ ತಮ್ಮಂದಿರು ಹಕ್ಕು ಬದಲಾವಣೆ ಮಾಡಿಕೊಂಡಿರುತ್ತೇವೆ ಅಂತಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿದ್ದು ಇದೆ ಎಂದರೆ ಸರಿ. ಯಾವ ದಾಖಲೆಯ ಆದಾರದ ಮೇಲೆ ಹಕ್ಕು ಬದಲಾವಣೆ ಮಾಡಿಸಿಕೊಂಡಿರುತೀರಿ ಎಂದರೆ ಸಾಕ್ಷಿಯುನಾವು ಹಕ್ಕು ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದಿರುತ್ತಾರೆ. ಪಹಣಿಗಳು ನಾಗಪ್ಪ ಮತ್ತು ನಿಂಗಪ್ಪ ಅಂತಾ ಜಂಟಿಯಾಗಿ ಬರುತ್ತವೆ ಎಂದರೆ ಸರಿ. ಸನ್ 1993 ರಲ್ಲಿ ನಮ್ಮ ತಾಯಿಯವರು ಜೀವಂತ ಇದ್ದರು. ದಾವಾ ಜಮೀನುಗಳ ಪಹಣಿಗಳನ್ನು ನಾನು ಮತ್ತು ನನ್ನ ಸಹೋದರ ಸೇರಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ನಾನು ಮತ್ತು ನನ್ನ ಸಹೋದರ ದಾವಾ 2 ನೇ ಆಸ್ತಿ ಮತ್ತು ದಾವಾ 7 ನೇ ಆಸ್ತಿ ಗಳ ಕುರಿತು ದಿ 24.04.2015 ರಂದು ನಾಡ ಕಚೇರಿಗೆ ನಾವು ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ ಖಾತೆ ಮಾಡಿ ಅಂತಾ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನಾವು ಸಹೋದರರು ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ. ಸದರಿ ಅರ್ಜಿಗೆ 3 ನೇ ವಾದಿಯು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಹಶೀಲ್ದಾರವರು ನಮಗೆ ಮತ್ತು 3 ನೇ ವಾದಿಗೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಿ ಅಂತಾ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಕುರಿತು ಇವತ್ತಿನವರೆಗೂ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಇವರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ಚಿಕ್ಕಪ್ಪ ಇವರಿಗೆ ಸಮನಾದ ಅರ್ಧ ಭಾಗ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರ ಮಲ್ಲಪ್ಪ ನನ್ನ ಅಕ್ಕನ ಗಂಡ. ನನ್ನ ಅಕ್ಕನ ಹೆಸರು ಹುಲಿಗೆಮ್ಮ. ನನ್ನ ತಮ್ಮ ನಿಂಗಪ್ಪ ಇವರಿಗೆ ಸಾಕ್ಷಿದಾರ ಮಲ್ಲಪ್ಪನ ಮಗಳಾದ ರೇಣುಕಮ್ಮ ಇವಳ ಜೊತೆ ವಿವಾಹ ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿದಾರ ಮಲ್ಲಪ್ಪ ಇವರು ಹಲಗಾಪುರ ಗ್ರಾಮದವರು. ಸದರಿ ಮಲ್ಲಪ್ಪ ಇವರಿಗೆ ಸೇರಿದ ಜಮೀನುಗಳು ದಾವಾ ಆಸ್ತಿಗಳ ಅಕ್ಕಪಕ್ಕ ಇರುವುದಿಲ್ಲ. ನಾವು ಯಾವ ಯಾವ ಭೂಮಿಗಳನ್ನು ಮಾಡುತ್ತೇವೆ ಅಂತಾ ಮಲ್ಲಪ್ಪ ಇವರಿಗೆ ಗೊತ್ತಿಲ್ಲ. ಮಲ್ಲಪ್ಪ ಇವರಿಗೆ ನನ್ನ ತಂದೆಗೆ ಎಷ್ಟು ಜಮೀನು ಮತ್ತು ನನ್ನ ಚಿಕ್ಕಪ್ಪನಿಗೆ

ಎಷ್ಟು ಜಮೀನು ಬಂದಿರುತ್ತವೆ ಎನ್ನುವ ವಿಚಾರ ಗೊತ್ತಿರುತ್ತದೆ. ಸಾಕ್ಷಿದಾರ ರಾಮಪ್ಪ ಇವರು ನಮ್ಮ ಊರಿನವರು. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ರಾಮಪ್ಪ ಇವರ ಜಮೀನು ಇರುತ್ತವೆ. ದಾವಾ ಆಸ್ತಿಗಳಲ್ಲಿ ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ಇವರ ನಡುವೆ ಈವರೆಗು ಯಾವುದೇ ವಿಭಾಗ ಆಗಿರುವುದಿಲ್ಲ ದಾವಾ ಆಸಿತಗಳಲ್ಲಿ ವಾದಿಯರರಿಗೂ ಸಮ ಪಾಲು ಇದ್ದರೂ ಸಹ ಅವರಿಗೆ ಅವರ ಹಿಸ್ಸೆಯನ್ನು ಕೊಡಬೇಕಾಗುತ್ತದೇ ಅನ್ನುವ ಕಾರಣದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 132/ಜಿ 78 ಸೆಂಟ್ಸ , 132/ಹೆಚ್ 1.6 ಎಕರೆ, ಸರ್ವೆ ನಂ 128/ಕೆ 1.2 ಎಕರೆ ಇವುಗಳನ್ನು ರಾಮಣ್ಣ ಇವರು ಖರೀದಿ ಮಾಡಿರುವಂತಹ ಭೂಮಿಗಳು ಎಂದರೆ ಸರಿಯಲ್ಲ. ಸರ್ವೆ ನಂ 132 ಜಿ 72 ಸೆಂಟ್ಸ ಜಮೀನನ್ನು ದಿನಾಂಕ 17.03.2017 ರಂದು ಬಸಮ್ಮ ಗಂಡ ಹನುಮಂತಪ್ಪ ಇವರಿಂದ ರಾಮಣ್ಣ ಇವನು ನೋಂದಣಿ ದಾಖಲೆ ಮೂಲಕ ಖರೀದಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ 132 ಹೆಚ್ 1.6 ಎಕರೆ ಜಮೀನನ್ನು ರಾಮಣ್ಣ ಇವರು ದಿ 03.06.2017 ರಂದು ನಾಗಮ್ಮ ಗಂಡ ಸಣ್ಣ ಬಡಕಪ್ಪ ಮತ್ತು ಹನುಮಂತಪ್ಪ ತಂದೆ ದೊಡ್ಡಬಡಕಪ್ಪ ಇವರಿಂದ ಖರೀದಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ವಾದಿಯರ ಸ್ವಂತ ಆಸ್ತಿಗಳ ದಾಖಲೆಗಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ